ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 15-09-1971.

*ಮಾಸ್ಟರ್ ಜ್ಞಾನಸೂರ್ಯ ಆತ್ಮರ ಕರ್ತವ್ಯ* (मास्टर ज्ञान-सूर्य आत्माओं का कर्तव्य)

ಈ ಸಂಘಟನೆಯು ಯಾವ ಸಂಘಟನೆಯೆಂದು ಹೇಳುವಿರಿ? ಈ ಸಂಘಟನೆಯ ವಿಶೇಷತೆ ಏನಾಗಿದೆ? ಯಾವ ವಿಶೇಷತೆಯಿದೆಯೋ ಅದರಂತೆಯೇ ಹೆಸರು ಹೇಳುವರು. ಈ ಸಂಘಟನೆಯ ಯಾವ ವಿಶೇಷತೆಯಿದೆ ಅದನ್ನು ಅನ್ಯ ಸಂಘಟನೆಯಲ್ಲಿ ನೋಡಿಲ್ಲ. ತಮ್ಮ ಸಂಘಟನೆಯ ವಿಶೇಷತೆಯನ್ನು ತಿಳಿದುಕೊಂಡಿದ್ದೀರಾ? ಈ ಸಂಘಟನೆಯು ಇಡೀ ಬ್ರಾಹ್ಮಣ ಪರಿವಾರದಲ್ಲಿ ವಿಶೇಷ ಆತ್ಮರ ಸಂಘಟನೆಯಾಗಿದೆ. ಆದರೆ ಈ ವಿಶೇಷ ಆತ್ಮರ ಸಂಘಟನೆಯ ವಿಶೇಷತೆಯೇನೆಂದರೆ ಇದರಲ್ಲಿ ಸರ್ವಪ್ರಸಿದ್ಧ ನದಿಗಳ ಮೇಳವಾಗಿದೆ. ನದಿತೀರಗಳಲ್ಲಿ ವಿಶೇಷ ದಿನಗಳಲ್ಲಿ ಅನೇಕ ಪ್ರಕಾರದ ಮೇಳಗಳಾಗುತ್ತವೆ ಆದರೆ ಈ ಮೇಳವು ಪ್ರಸಿದ್ಧ ನದಿಗಳ ಮೇಳವಾಗಿದೆ. ಜ್ಞಾನಸಾಗರನಿಂದ ಹೊರಟಿರುವ ಪತಿತ-ಪಾವನಿ ನದಿಗಳ ಮಿಲನವಾಗಿದೆ. ತಮ್ಮನ್ನು ಪತಿತ- ಪಾವನಿ ಎಂದು ತಿಳಿಯುತ್ತೀರಾ? ಒಂದುವೇಳೆ ಪತಿತ-ಪಾವನಿಯಾಗಿದ್ದರೆ ಮುಖ್ಯಮಾತು ತಿಳಿದಿದೆಯೇ? ಪತಿತ-ಪಾವನಿಯಾರಾಗಲು ಹೇಗೆ ಸಾಧ್ಯ? ಪತಿತಪಾವನಿ ಆಗಬೇಕೆಂದರೆ ಮುಖ್ಯವಾಗಿ ಯಾವ ಮಾತನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳುವಿರಿ? ಯಾವುದರಿಂದ ಎಂತಹ ಪತಿತರೂ ಸಹ ಪಾವನರಾಗಿಬಿಡಬೇಕು? ಯಾವುದೇ ಪತಿತ ಆತ್ಮನ ಸಂಕಲ್ಪವು ಸಮಾವೇಶವಾಗಿಬಿಡಬೇಕು. ಇದಕ್ಕಾಗಿ ಸದಾ ಬುದ್ಧಿಯಲ್ಲಿ ಇದೇ ಮುಖ್ಯಮಾತು ನೆನಪಿರಲಿ- ನಾನು ಸರ್ವ ಆತ್ಮರ ಪತಿತ ಸಂಕಲ್ಪಗಳು ಹಾಗೂ ವೃತ್ತಿ ಮತ್ತು ದೃಷ್ಟಿಯನ್ನು ಭಸ್ಮ ಮಾಡುವಂತಹ ಮಾಸ್ಟರ್ ಜ್ಞಾನಸೂರ್ಯನಾಗಿದ್ದೇನೆ. ಒಂದುವೇಳೆ ಮಾಸ್ಟರ್ ಜ್ಞಾನಸೂರ್ಯರಾಗಿ ಯಾವುದೇ ಪತಿತ ಆತ್ಮನನ್ನು ನೋಡುತ್ತೀರೆಂದರೆ ಹೇಗೆ ಸೂರ್ಯನು ತನ್ನ ಕಿರಣಗಳಿಂದ ಕಸ-ಕೊಳಕಿನ ಕೀಟಾಣುಗಳನ್ನು ಭಸ್ಮ ಮಾಡುತ್ತಾನೆಯೋ ಹಾಗೆಯೇ ಯಾವುದೇ ಪತಿತ ಆತ್ಮನ ಪತಿತ ಸಂಕಲ್ಪಗಳು ಪತಿತ- ಪಾವನಿ ಆತ್ಮನ ಮೇಲೆ ದಾಳಿ ಮಾಡಲು ಸಾಧ್ಯವಿಲ್ಲ. ಅಲ್ಲದೆ ಪತಿತ ಆತ್ಮರು ತಾವು ಪತಿತ-ಪಾವನಿಯರ ಮೇಲೆ ಬಲಿಹಾರಿಯಾಗುವರು. ಒಂದುವೇಳೆ ಯಾವುದೇ ಪತಿತ ಆತ್ಮನಿಗೆ ಪತಿತ-ಪಾವನಿಯರ ಪ್ರತಿ ಪತಿತ ಸಂಕಲ್ಪ ಉತ್ಪನ್ನವಾದರೆ, ತಿಳಿದುಕೊಳ್ಳಿ- ಮೈಕ್ ಆಗಿದ್ದೀರಿ, ಇನ್ನೂ ಮೈಟ್ ಹೌಸ್ ಆಗಲಿಲ್ಲ. ಆದ್ದರಿಂದ ಹೇಗೆ ಮೈಕ್ ಶಬ್ದವು ಬಹಳ ಮಧುರವೆನಿಸುತ್ತದೆ ಮತ್ತು ಮೈಕ್ ಅರ್ಥಾತ್ ಶಬ್ದವು ಕನರಸದ(ಕಿವಿಗೆ ಇಂಪು) ಪ್ರಾಪ್ತಿ ಮಾಡಿಸುತ್ತದೆ. ಆದರೆ ಮೈಟ್ ಹೌಸ್ ಸ್ಥಿತಿಯು ಮನರಸದ ಸ್ಥಿತಿಯ ಅನುಭವ ಮಾಡಿಸುತ್ತದೆ. ಒಂದುವೇಳೆ ಒಂದುಬಾರಿಯಾದರೂ ಇಂದ್ರಿಯಗಳ ರಸದ ಅನುಭವ ಮಾಡುತ್ತಾರೆಂದರೆ ಈ ಇಂದ್ರಿಯಗಳ ರಸವು ಅನೇಕ ಅಲ್ಪಕಾಲದ ರಸದಕಡೆ ಆಕರ್ಷಿತ ಮಾಡಿಬಿಡುತ್ತದೆ.

ಯಾವುದೇ ಪತಿತ ಆತ್ಮನಿಗೆ ಯಾವುದೇ ಇಂದ್ರಿಯಗಳ ರಸ ಅರ್ಥಾತ್ ವಿನಾಶೀರಸದ ಕಡೆ ಆಕರ್ಷಣೆ ಆಗಬಾರದು. ಬರುತ್ತಿದ್ದಂತೆಯೇ ಅಲೌಕಿಕ ಅತೀಂದ್ರಿಯ ಸುಖ ಹಾಗೂ ಮನರಸದ ಅನುಭವ ಮಾಡಲಿ, ಇದಕ್ಕಾಗಿ ಮೊದಲು ಪತಿತ-ಪಾವನಿಯರು ಮನ್ಮನಾಭವ ಸ್ಥಿತಿಯಲ್ಲಿರಬೇಕು. ಒಂದುವೇಳೆ ಸ್ವಯಂನ ಯಾವುದೇ ದೇಹಾಭಿಮಾನ ಹಾಗೂ ದೇಹದ ಪ್ರಪಂಚ ಅರ್ಥಾತ್ ಹಳೆಯ ಪ್ರಪಂಚದ ಯಾವುದೇ ವಸ್ತುವಿನ ರಸದಲ್ಲಿ ಸ್ವಲ್ಪ ಸಿಲುಕಿಕೊಂಡಿದ್ದರೂ ಸಹ ಅಂತಹವರು ಅನ್ಯರಿಗೆ ಮನರಸದ ಅನುಭವ ಹೇಗೆ ಮಾಡಿಸಬಲ್ಲಿರಿ? ಕಲಿಯುಗೀ ಸ್ಥೂಲವಸ್ತುಗಳ ರಸ ಹಾಗೂ ಮನಸ್ಸಿನ ಸೆಳೆತ ಕಳೆದಿರಲೂಬಹುದು ಆದರೆ ಇದರ ನಂತರ ಇನ್ನೂ ಯಾವ ಸ್ಟೇಜಿನಿಂದ ಪಾರಾಗಬೇಕೆಂದು ತಿಳಿದುಕೊಂಡಿದ್ದೀರಾ? ಕಬ್ಬಿಣದ ಸರಪಳಿಗಳು ದೊಡ್ಡ-ದೊಡ್ಡ ಹಗ್ಗಗಳನ್ನು ಕತ್ತರಿಸಿದ್ದೀರಿ ಆದರೆ ಬಹಳ ಸೂಕ್ಷ್ಮ ದಾರಗಳು ಕೆಲವೊಂದೆಡೆ ಬಂಧನಮುಕ್ತರನ್ನಾಗಿ ಮಾಡುತ್ತಿಲ್ಲ. ದಾರಗಳು ಯಾವುದು? ಈ ಗ್ರೂಪಿನವರಿಗೆ ಇದನ್ನು ಗುರುತಿಸುವುದೇನೂ ದೊಡ್ಡಮಾತಲ್ಲ. ತಿಳಿದುಕೊಂಡಿದ್ದೀರಿ- ಮಾಡಲು ಮಾಡುವುದಕ್ಕೂ ಇಚ್ಛಿಸುತ್ತೀರಿ ಆದರೆ ಇನ್ನೇನು ಉಳಿದುಕೊಂಡಿದೆ? ಎಲ್ಲದಕ್ಕಿಂತ ಅತಿಸೂಕ್ಷ್ಮವಾದ ದಾರ ಯಾವುದು? ಯಾವುದು ಜ್ಞಾನಿಗಳಾದ ನಂತರವೂ ಹೊಸಬಂಧನವನ್ನು ಆರಂಭಿಸುತ್ತದೆ? (ಪ್ರತಿಯೊಬ್ಬರೂ ತಿಳಿಸಿದ್ದರು) ಇದನ್ನು ಎಲ್ಲರೂ ನೋಟ್ ಮಾಡಿಕೊಳ್ಳಿರಿ. ಇದೂ ಕೆಲಸಕ್ಕೆಬರುತ್ತದೆ, ಇನ್ನು ಏನು

ಉಳಿದುಕೊಂಡಿದೆ? ಈ ಗ್ರೂಪ್‌ನಲ್ಲಿ ಗಂಗಾ, ಯಮುನಾ ಒಂದಾಗಿಬಿಟ್ಟಿರಿ. ಇದು ವಿಶೇಷತೆಯಲ್ಲವೆ. ಸರಸ್ವತಿಯಂತೂ ಗುಪ್ತವಾಗಿರುತ್ತದೆ. ಇದಕ್ಕೂ ಬಹಳ ಗುಪ್ತರಹಸ್ಯವಿದೆ. ಗಂಗೆ ಯಾರು ಮತ್ತು ಯಮುನಾ ಯಾರು! ಮೊದಲು ಇದನ್ನು ತಿಳಿಸಿ- ಎಲ್ಲದಕ್ಕಿಂತ ಸೂಕ್ಷ್ಮ ದಾರ ಯಾವುದು? ಇದರಿಂದ ತಾವೇ ಅರ್ಥಮಾಡಿಕೊಳ್ಳುವಿರಿ ಗಂಗಾ ಯಾರು ಮತ್ತು ಯಮುನಾ ಯಾರು ಎಂದು. ಎಲ್ಲದಕ್ಕಿಂತ ಸೂಕ್ಷ್ಮ ಹಾಗೂ ಬಹಳ ಸುಂದರವಾದ ಧಾರವನ್ನು ಒಂದು ಶಬ್ದದಲ್ಲಿ ಹೇಳುವುದಾದರೆ ಅದಾಗಿದೆ- 'ನಾನು' ನಾನು ಶಬ್ಬವು ದೇಹಾಭಿಮಾನದಿಂದ ದೂರ ತೆಗೆದುಕೊಂಡು ಹೋಗುವಂತದ್ದಾಗಿದೆ. ಮತ್ತು ನಾನು ಎಂಬ ಶಬ್ದವೇ ಆತ್ಮಾಭಿಮಾನಿಯಿಂದ ದೇಹಾಭಿಮಾನದಲ್ಲಿ ತರುವಂತದ್ದೂ ಆಗಿದೆ. ನಾನು ದೇಹವಾಗಿದ್ದೇನೆ. ಇದರಿಂದ ದೂರಹೋಗುವ ಅಭ್ಯಾಸವನ್ನಂತೂ ಮಾಡುತ್ತಾ ಇರುತ್ತೀರಿ. ಆದರೆ ಇದೇ ನಾನು ಎಂಬ ಶಬ್ದ, ನಾನು ಇಂತಹವನಾಗಿದ್ದೇನೆ, ನನಗೆಲ್ಲವೂ ಗೊತ್ತಿದೆ. ನಾನು ಯಾವ ಮಾತಿನಲ್ಲಿಯೂ ಕಡಿಮೆಯಿಲ್ಲ ಎಂದು. ಎಲ್ಲವನ್ನೂ ನನು ಮಾಡಬಲ್ಲೆನು, ನಾನು ಯಾರಾಗಿದ್ದೇನೆ. ಹೇಗಿದ್ದೇನೆ ನಾನು ತಿಳಿದುಕೊಂಡಿದ್ದೇನೆ. ನಾನು ಹೇಗೆ ಸಹನೆ ಮಾಡುತ್ತೇನೆ, ಹೇಗೆ ಸಮಸ್ಯೆಗಳನ್ನು ಎದುರಿಸುತ್ತೇನೆ, ಹೇಗೆ ಸತ್ತುನಡೆಯುತ್ತಿದ್ದೇನೆ, ತ್ಯಾಗ ಮಾಡಿ ನಡೆಯುತ್ತಿದ್ದೇನೆ, ನನಗೆಲ್ಲವೂ ಗೊತ್ತಿದೆ. ಹೀಗೆ ನಾನು ಎಂಬ ಪಟ್ಟಿಯು ಸರಿಯಾಗಿರುವ ಬದಲು ಉಲ್ಟಾರೂಪದಲ್ಲಿ ಸೂಕ್ಷ್ಮ, ಸುಂದರವಾದ ದಾರ ಮಾಡಿಬಿಡುತ್ತದೆ. ಇದು ಎಲ್ಲದಕ್ಕಿಂತ ದೊಡ್ಡ ಸೂಕ್ಷ್ಮ ದಾರವಾಗಿದೆ. ನ್ಯಾರಾ ಆಗುವ ಬದಲು ತಂದೆಗೆ ಪ್ರಿಯರನ್ನಾಗಿ ಮಾಡುವ ಬದಲು ಯಾವುದೇ ಆತ್ಮನಿಗೆ ಅಥವಾ ಯಾವುದೇ ವಸ್ತುವಿಗೆ ಪ್ರಿಯರನ್ನಾಗಿ ಮಾಡಿಬಿಡುತ್ತದೆ. ಸ್ಥಾನ-ಮಾನ, ಕೀರ್ತಿಗೆ ಪ್ರಿಯರಾಗಬಹುದು ಅಥವಾ ಯಾವುದೇ ವಿಶೇಷ ಆತ್ಮರಿಗೆ ಪ್ರಿಯರನ್ನಾಗಿ ಮಾಡಿಬಿಡುತ್ತದೆ. ಅಂದಮೇಲೆ ಈ ದಾರವನ್ನು ಕತ್ತರಿಸುವುದಕ್ಕಾಗಿ ಅಥವಾ ಈ ದಾರದಿಂದ ಬಂಧನ ಮುಕ್ತರಾಗುವುದಕ್ಕಾಗಿ ಏನು ಮಾಡಬೇಕು? ಹೇಗೆ ಪರಿವರ್ತನೆ ಯಾಗುವುದು? ಜವಾಬ್ದಾರಿಯ ಕಿರೀಟಧಾರಿಗಳಾದ ಗ್ರೂಪನ್ನೇ ಕರೆಸಲಾಗಿದೆಯಲ್ಲವೆ. ಜವಾಬ್ದಾರಿಯ ಲಕ್ಷ್ಯವನ್ನು ಧಾರಣೆಮಾಡಿಕೊಳ್ಳುವಂತಹ ಗ್ರೂಪ್ ಆಗಿದ್ದೀರಿ. ಬಾಕಿ ಇನ್ನೇನು ಬೇಕು? ನಿರಹಂಕಾರಿಯಾಗಿದ್ದೀರಾ? ನಿರಾಕಾರಿಯಾಗಿದ್ದೀರಾ? ಒಂದುವೇಳೆ ನಿರಾಕಾರಿ ಸ್ಥಿತಿಯಲ್ಲಿ ಸ್ಥಿತರಾಗಿ ನಿರಹಂಕಾರಿಗಳಾಗಿದ್ದೇ ಆದರೆ ಸಹಜವಾಗಿ ನಿರ್ವಿಕಾರಿಗಳಾಗುತ್ತೀರಿ. ನಿರಹಂಕಾರಿಗಳಾಗಿ ಅವಶ್ಯವಾಗಿ ಆಗುತ್ತೀರಿ. ಆದರೆ ನಿರಾಕಾರಿಯಾಗಿ ನಿರಹಂಕಾರಿಯಾಗುವುದಿಲ್ಲ. ಯುಕ್ತಿಗಳಿಂದ ತಮ್ಮನ್ನು ಅಲ್ಪಸಮಯಕ್ಕಾಗಿ ನಿರಹಂಕಾರಿಗಳನ್ನಾಗಿ ಮಾಡಿಕೊಳ್ಳುತ್ತೀರಿ ಆದರೆ ನಿರಂತರ ನಿರಾಕಾರಿ ಸ್ಥಿತಿಯಲ್ಲಿ ಸ್ಥಿತರಾಗಿ ಸಾಕಾರದಲ್ಲಿ ಬಂದು ಈ ಕಾರ್ಯ ಮಾಡುತ್ತಿದ್ದೇನೆ. ಎಂಬ ಸ್ಮೃತಿ ಹಾಗೂ ಅಭ್ಯಾಸವು ನ್ಯಾಚುರಲ್ ಹಾಗೂ ನೇಚರ್ ಆಗದಿರುವಕಾರಣ ನಿರಂತರ ನಿರಹಂಕಾರಿ ಸ್ಥಿತಿಯಲ್ಲಿ ಸ್ಥಿತರಾಗಲು ಆಗುವುದಿಲ್ಲ. ಹೇಗೆ ಯಾರಾದರೂ ಎಲ್ಲಿಂದಲಾದರೂ ಬಂದರೆ ಅವರಿಗೆ ನಾನು ಇಂತಹ ಕಡೆಯಿಂದ ಬಂದಿದ್ದೇನೆ ಎಂದು ಸದಾ ಸ್ಮೃತಿಯಿರುತ್ತದೆ. ಅದೇರೀತಿ ಈ ಸ್ಮೃತಿ ಸದಾ ಇರಲಿ- ನಾನು ನಿರಾಕಾರಿಯಿಂದ ಸಾಕಾರದಲ್ಲಿ ಬಂದು ಈ ಕಾರ್ಯವನ್ನು ಮಾಡುತ್ತಿದ್ದೇನೆ. ಮಧ್ಯ-ಮಧ್ಯದಲ್ಲಿ ಪ್ರತೀ ಕರ್ಮವನ್ನು ಮಾಡುತ್ತಾ ಸ್ಥಿತಿಯ ಅಭ್ಯಾಸ ಮಾಡುತ್ತಾ ಇರಿ. ಆಗ ನಿರಾಕಾರಿಯಾಗಿ ಸಾಕಾರದಲ್ಲಿ ಬರುವುದರಿಂದ ನಿರಹಂಕಾರಿ ನಿರ್ವಿಕಾರಿ ಅವಶ್ಯವಾಗಿ ಆಗುತ್ತೀರಿ. ಈ ಅಭ್ಯಾಸವನ್ನು ಅಲ್ಪಕಾಲಕ್ಕಾಗಿ ಮಾಡುತ್ತೀರಿ ಆದರೆ ಈಗ ಇದನ್ನೇ ಸದಾಕಾಲದಲ್ಲಿ ಪರಿವರ್ತಿಸಿಕೊಳ್ಳಿ. ವೈರಾಗಿಗಳೂ ಆಗಿದ್ದೀರಿ. ವೈರಾಗ್ಯವೃತ್ತಿಯಿದೆ ಆದರೆ ಈಗ ಸದಾಕಾಲಕ್ಕಾಗಿ ಮತ್ತು ಬೇಹದ್ದಿನ ವೈರಾಗಿಗಳಾಗಿ. ಇಲ್ಲವೆಂದರೆ ಯಾವುದೇ ಹದ್ದಿನ ವಸ್ತು ವೈರಾಗ್ಯವೃತ್ತಿಯಿಂದ ದೂರಸರಿಸಲು ನಿಮಿತ್ತವಾಗಿಬಿಡುತ್ತದೆ. ಯೋಗಯುಕ್ತರೂ ಆಗಿದ್ದೀರಿ ಅದರೆ ಯೋಗಯುಕ್ತದ ಲಕ್ಷಣವನ್ನು ಪ್ರ್ಯಾಕ್ಟಿಕಲ್ ಕರ್ಮದಲ್ಲಿ ತೋರಿಸಿ. ನಿಮ್ಮ ಪ್ರತೀಕರ್ಮ, ಪ್ರತೀ ಮಾತು ಯಾವುದೇ ಆತ್ಮನನ್ನು ಭೋಗಿಯಿಂದ ಯೋಗಿಯನ್ನಾಗಿ ಮಾಡಲಿ. ಪ್ರತೀ ಸಂಕಲ್ಪ, ಪ್ರತಿಕರ್ಮ, ಯುಕ್ತಿಯುಕ್ತ, ರಹಸ್ಯಯುಕ್ತವಾಗಿ, ರಾಜಯುಕ್ತವಾಗಿರಲಿ. ಅಂತಹವರಿಗೆ ಪ್ರ್ಯಾಕ್ಟಿಕಲ್ ಯೋಗಯುಕ್ತರೆಂದು ಹೇಳಲಾಗುವುದು. ತಮ್ಮ ಸಂಕಲ್ಪ ಹಾಗೂ ಮಾತಿನಲ್ಲಿ, ಕರ್ಮದಲ್ಲಿ ಒಂದುವೇಳೆ ಈ ಮೂರು ಮಾತುಗಳಿಲ್ಲವೆಂದರೆ ಅದು ವ್ಯರ್ಥವಾಗಿದೆ. ಒಂದುವೇಳೆ ರಾಜಯುಕ್ತವಾಗಿ ಇಲ್ಲದಿದ್ದರೆ ಏನಾಗುವುದು?ವ್ಯರ್ಥವಾಗುವುದು. ತಿಳಿದುಕೊಳ್ಳಿ- ಈಗ ಪ್ರ್ಯಾಕ್ಟಿಕಲ್ ಯೋಗಿಯಾಗಿಲ್ಲ. ಆದರೆ, ಪ್ರ್ಯಾಕ್ಟೀಸ್ ಮಾಡುವಂತಹ ಯೋಗಿಯಾಗಿದ್ದೀರಿ, ಆದ್ದರಿಂದ ಈಗ ಈ ಮಾತಿನ ಮೇಲೆ ಗಮನದ ಅವಶ್ಯಕತೆಯಿದೆ. ನಂತರ ಯಾವುದೇ ಸಮಸ್ಯೆ,

ವಿಘ್ನ, ಪರಿಸ್ಥಿತಿಗಳು ತಮ್ಮಮೇಲೆ ದಾಳಿ ಮಾಡುವುದಿಲ್ಲ. ಪ್ರತ್ಯಕ್ಷ ಯೋಗಯುಕ್ತ, ಯುಕ್ತಿಯುಕ್ತ, ಸ್ನೇಹಯುಕ್ತ, ದಿವ್ಯ- ಆಲೌಕಿಕ ಮೂರ್ತಿಯಿಂದ ವಿಶ್ವದಮುಂದೆ ಪ್ರಮಾಣವಾಗಿಬಿಡುತ್ತೀರಿ. ಯಾರು ವಿಶ್ವದ ಮುಂದೆ ಜ್ಞಾನ ಹಾಗೂ ಯೋಗದ ಪ್ರೂಫ್ ಆಗುವರೋ ಅವರೇ ಮಾಯಾಪ್ರೊಫ್ ಆಗುತ್ತಾರೆ ಅಂದಮೇಲೆ ಮಾಯಾಪ್ರೂಫ್. ತಮ್ಮನ್ನು ಹೀಗೆ ತಿಳಿದುಕೊಳ್ಳಿ- ನಾನು ಜ್ಞಾನ ಮತ್ತು ಯೋಗದ ಪ್ರೂಫ್ ಆಗಿದ್ದೇನೆ. ಈ ಪ್ರಮಾಣ ರೂಪವಾಗುವುದು ಅರ್ಥಾಥ್ ಆತ್ಮರ ಇಚ್ಛೆಗಳನ್ನು ಪೂರ್ಣಗೊಳಿಸುವುದಾಗಿದೆ. ಸದಾ ಪ್ರತೀ ಸಂಕಲ್ಪ ಮತ್ತು ಹೆಜ್ಜೆಯಲ್ಲಿ ತಂದೆಯ ಆಜ್ಞೆಯನುಸಾರ ನಡೆಯುವವರು ಅನ್ಯ ಆತ್ಮರ ಇಚ್ಛೆಗಳನ್ನೂ ಸಹ ಸಮಾಪ್ತಿ ಮಾಡುವರು. ತಮ್ಮೊಳಗೂ ಪುರುಷಾರ್ಥ ಹಾಗೂ ಸಫಲತೆಯ ಕೋರಿಕೆ ಉಳಿದುಕೊಳ್ಳಲು ಕಾರಣವೇನೆಂದರೆ ಯಾವುದಾದರೊಂದು ತಂದೆಯ ಆಜ್ಞೆಯ ಪಾಲನೆ ಮಾಡಲಿಲ್ಲವೆಂದರ್ಥ. ಯಾವುದೇ ಗಳಿಗೆಯಲ್ಲಿ ತಮ್ಮ ಪುರುಷಾರ್ಥದಮೇಲೆ ಹಾಗೂ ಸೇವೆಯ ಸಫಲತೆಯ ಮೇಲೆ ಸರ್ವರ ಸ್ನೇಹ ಮತ್ತು ಸಹಯೋಗದ ಪ್ರಾಪ್ತಿಯ ಮೇಲೆ ಸ್ವಲ್ಪವೂ ಕೊರತೆ ಹಾಗೂ ಗೊಂದಲವಾದರೆ ಪರಿಶೀಲನೆ ಮಾಡಿಕೊಳ್ಳಿ- ಯಾವ ಆಜ್ಞೆಯ ಕೊರತೆಯಕಾರಣ ಅದರ ಪ್ರತ್ಯಕ್ಷಫಲವನ್ನು ಒಂದುಕ್ಷಣಕ್ಕಾಗಿಯಾದರೂ ಅನುಭವ ಮಾಡುತ್ತಿದ್ದೇವೆ! ಕೇವಲ ಮುಖ್ಯಮಾತುಗಳ ಆಜ್ಞೆಯಷ್ಟೇ ಅಲ್ಲ, ಪ್ರತೀ ಸಮಯದ ಪ್ರತೀ ಕಾರ್ಯಕ್ಕಾಗಿ ಆಜ್ಞೆ ಸಿಕ್ಕಿದೆ. ಬೆಳಗ್ಗೆ ಅಮೃತವೇಳೆಯಿಂದ ಹಿಡಿದು ರಾತ್ರಿಯವರೆಗೆ ತಮ್ಮ ದಿನಚರಿಯಲ್ಲಿ ಯಾವ ಆಜ್ಞೆಯು ಸಿಕ್ಕಿದೆಯೋ ಅದನ್ನು ಪರಿಶೀಲನೆ ಮಾಡಿಕೊಳ್ಳಿ. ವೃತ್ತಿ, ದೃಷ್ಟಿ, ಸಂಕಲ್ಪ, ಸ್ಮೃತಿ, ಸರ್ವೀಸ್ ಹಾಗೂ ಸಂಬಂಧ ಎಲ್ಲವನ್ನೂ ಪರಿಶೀಲನೆ ಮಾಡಿಕೊಳ್ಳಿ- ಹೇಗೆ ಯಾವುದೇ ಯಂತ್ರವು ನಡೆಯುತ್ತಾ- ನಡೆಯುತ್ತಾ ಅದರ ವೇಗವು ಕಡಿಮೆಯಾದರೆ ಅದನ್ನು ಎಲ್ಲಾ ಪ್ರಕಾರದಲ್ಲಿಯೂ ಪರಿಶೀಲನೆ ಮಾಡುತ್ತಾರೆ. ಹೀಗೆ ನಾಲ್ಕೂಕಡೆ ಪರಿಶೀಲನೆ ಮಾಡುವುದರಿಂದ ವೇಗವನ್ನು ತೀವ್ರಮಾಡುತ್ತಾರೆ. ಏಕೆಂದರೆ ಈಗ ನಿಲ್ಲುವ ಮಾತು ಸಮಾಪ್ತಿಯಾಯಿತು. ಈಗ ವೇಗವನ್ನು ತೀವ್ರಗೊಳಿಸುವ ಮಾತಾಗಿದೆ. ಯಾವ ಸ್ಥಿತಿಯನ್ನು ಕೇಳಿದ್ದೀರೋ ಆದರಲ್ಲಿ ನಿಲ್ಲುತ್ತೀರಿ ಮತ್ತು ಪುರುಷಾರ್ಥದಲ್ಲಿ ವಿಶೇಷ ಆತ್ಮರೂ ಆಗಿದ್ದೀರಿ.

ಸ್ಥಿತಿಯನ್ನು ಪರಿಶೀಲನೆ ಮಾಡಿಕೊಳ್ಳುವುದರಲ್ಲಿ ಸರಿಯಾಗಿದ್ದೀರಿ ಆದರೆ ಈಗ ಏನು ಮಾಡಬೇಕಾಗಿದೆ? ಪರ್ಸೆಂಟೇಜನ್ನು ಹೆಚ್ಚಿಸಿಕೊಳ್ಳಿ, ಪರ್ಸೆಂಟೇಜ್ ಕಡಿಮೆಯಿದೆ. ಯಾವ ಪರೀಕ್ಷೆಯನ್ನು ಬರೆದಿದ್ದೀರಿ ಅದರ ರಿಸಲ್ಟ್ ಇದಾಗಿದೆ. ಜ್ಞಾನದ ಶಕ್ತಿಯಿಂದ ಸ್ಥಿತಿಯನ್ನು ತಯಾರು ಮಾಡಿಕೊಳ್ಳುತ್ತೀರಿ ಆದರೆ ಪರ್ಸೆಂಟೇಜ್‌ನಲ್ಲಿ ನೋಡಿದಾಗ ನಿಮ್ಮಿಂದಲೂ ನೀವು ಸಂತುಷ್ಟವಾಗಿಲ್ಲ. ಈಗ ಇದನ್ನು ಸಂಪೂರ್ಣ ಮಾಡಬೇಕಾಗಿದೆ. ಜ್ಞಾನದ ಫೋರ್ಸ್‌ನ ಜೊತೆಗೆ ಯಾವ ಆಳವಾದ ಮಾತನ್ನು ತಿಳಿಸಿದೆವೋ, ಯಾವ ಸೂಕ್ಷ್ಮ ದಾರಗಳ ಕಾರಣ ನಕಲು ನಷ್ಟಮಾಡುವಂತಹ ಫೋರ್ಸ್ ಸಹ ಮಿಕ್ಸ್ ಆಗಿಬಿಡುತ್ತವೆ. ನಕಲಿ ಫೋರ್ಸ್, ನಷ್ಟಮಾಡುವಂತಹ ಫೋರ್ಸ್ ಬರಬಾರದು. ಅದಕ್ಕಾಗಿ ಯಾವ ಮಾತನ್ನು ಸ್ಮೃತಿಯಲ್ಲಿಟ್ಟು ಕೊಳ್ಳುತ್ತೀರಿ? **ಒಂದುವೇಳೆ ಪ್ರತಿಯೊಂದು ಆತ್ಮನಪ್ರತಿ ದಯಾಭಾವನೆ, ಸದಾಕಾಲಕ್ಕಾಗಿ ಇದ್ದಿದ್ದೇ ಆದರೆ ಯಾರದೇ ತಿರಸ್ಕಾರವನ್ನು ಮಾಡುವುದಿಲ್ಲ**. ಯಾರಿಂದಲೂ ತಮ್ಮ ತಿರಸ್ಕಾರವನ್ನು ಪಡೆಯುವುದಿಲ್ಲ. ಎಲ್ಲಿ ದಯೆಯಿರುವುದೋ ಅಲ್ಲಿ ಎಂದೂ ಫೋರ್ಸ್ ಇರುವುದಿಲ್ಲ. ಎಲ್ಲಿ ದಯಾಹೃದಯಿಗಳಾಗಬೇಕೋ ಅಲ್ಲಿ ದಯಾಹೃದಯಿಗಳಾಗುವ ಬದಲು ರೋಷಧಾರಿಗಳಾಗಿಬಿಡುತ್ತೀರಿ (ಅಹಂಕಾರಿ). ಆದರೆ ಇಲ್ಲಿ ಇನ್ನೂ ವಿಶ್ವಮಹಾರಾಜನ್ ಆಗಿಲ್ಲ. ತಮ್ಮನ್ನು ಸ್ಟೇಟ್‌ನ (ರಾಜ್ಯ) ಮಾಲೀಕನೆಂದು ತಿಳಿಯುತ್ತೀರಲ್ಲವೆ. ತಾವೆಲ್ಲರೂ ಸ್ಟೇಟ್ ಮಿನಿಸ್ಟರ್ಸ್ ಬಂದಿದ್ದೀರಿ, ಅಂದಮೇಲೆ ಸ್ಟೇಟ್‌ನ ಮಾಲೀಕರೆಂದು ತಿಳಿಯುವುದರಿಂದ ನಿರಾಕಾರಿ, ನಿರಹಂಕಾರಿ ಸ್ಟೇಜನ್ನು ಮರೆತುಹೋಗುತ್ತೀರಿ. ಸ್ಟೇಟ್‌ನ ಸೇವಾಧಾರಿಗಳಾಗಿದ್ದೀರಿಯೇ ಹೊರತು ಯಾವುದೇ ಆತ್ಮನಿಂದ ಸೇವೆ ತೆಗೆದುಕೊಳ್ಳುವವರಲ್ಲ. ಒಂದುವೇಳೆ ಯಾರಿಗಾದರೂ ನಾನು ಇಷ್ಟು ಮಾಡಿದೆನು ಆದ್ದರಿಂದ ಇದರಲ್ಲಿ ನನಗೆ ಸ್ವಲ್ಪವಾದರೂ ಸ್ಥಾನ-ಮಾನ, ಮಹಿಮೆ ಸಿಗಬೇಕು ಎಂದು ಸಂಕಲ್ಪಬಂದರೂ ಸಹ ಇದೂ ತೆಗೆದುಕೊಳ್ಳುವ ಭಾವನೆಯಾಯಿತು. ದಾತನ ಮಕ್ಕಳು ಒಂದುವೇಳೆ ಈ ರೀತಿ ತೆಗೆದುಕೊಳ್ಳುವ ಸಂಕಲ್ಪ ಮಾಡಿದರೂ ಸಹ ಅವರು ದಾತನಾಗಲಿಲ್ಲ. ಈ ರೀತಿ ತೆಗೆದುಕೊಳ್ಳುವುದೂ ಸಹ ಕೊಡುವವರಿಗೆ ಶೋಭಿಸುವುದಿಲ್ಲ. ಇಂತಹವರನ್ನೇ ಬೇಹದ್ದಿನ ವೈರಾಗಿಗಳೆಂದು ಹೇಳಲಾಗುತ್ತದೆ. ಸೇವಾಧಾರಿಗಳಿಗೆ ಈ ಸಂಕಲ್ಪವೂ ಬರಬಾರದು ಆಗಲೇ ಸ್ಟೇಟ್‌ನಿಂದ ತಮ್ಮ ಬೇಹದ್ದಿನ ವಿಶ್ವಮಹಾರಾಜನಾಗುವ ಸ್ಟೇಟಸ್‌ನ್ನು ಪಡೆಯುವಿರಿ. ಒಳ್ಳೆಯದು- ಯಾರು ನಿಷ್ಕಾಮಿಯಾಗಿರುವರೋ ಅವರೇ ವಿಶ್ವಕಲ್ಯಾಣಕಾರಿಯಾಗುವರು.

ದಯಾಹೃದಯಿಯಾಗುವರು. ಕರ್ತವ್ಯದ ಪ್ರಾಪ್ತಿಯು ಸ್ವತಹವಾಗಿ ಆಗುವುದು ಬೇರೆ ಮಾತಾಗಿದೆ, ಆದರೆ ಕಾಮನೆಯಿಂದ ಪ್ರಾಪ್ತಿ ಮಾಡಿಕೊಳ್ಳುವುದು- ಇದು ಭಲೆ ಅಲ್ಪ ಕಾಲಕ್ಕಾಗಿಯೇ ಪ್ರಾಪ್ತಿಯಾಗಬಹುದು ಆದರೆ ಅನೇಕಜನ್ಮಗಳಿಗಾಗಿ ಅನೇಕ ಪ್ರಾಪ್ತಿಗಳಿಂದ ವಂಚಿತರನ್ನಾಗಿ ಮಾಡಿಬಿಡುತ್ತದೆ. ಪ್ರಾಪ್ತಿಯು ಅಪ್ರಾಪ್ತಿಯ ಸಾಧನವಾಗಿಬಿಡುತ್ತದೆ. ಫಲದ ಪ್ರಾಪ್ತಿಯಾಗುವುದು ಬೇರೆ ಮಾತಾಗಿದೆ, ಪ್ರಕೃತಿ ದಾಸಿಯಾಗುವುದು ಬೇರೆಮಾತಾಗಿದೆ. ಹೀಗೆ ಅಲ್ಪಕಾಲದ ಪ್ರಾಪ್ತಿಯ ರೂಪವನ್ನು ಗುರುತಿಸಿಕೊಳ್ಳುತ್ತಾ ಹೋಗಿ. ಕೆಲವರು ಶಕ್ತಿಯಿಲ್ಲವೆಂದು ತಿಳಿದುಕೊಳ್ಳುತ್ತಾರೆ ಏಕೆ? ಏಕೆಂದರೆ ವೇಸ್ಟೇಜ್ ಇರುವಕಾರಣ ಸ್ಟೇಜ್(ಸ್ಥಿತಿ) ಹೆಚ್ಚುವುದಿಲ್ಲ. ಒಳ್ಳೆಯದು.

ಅವ್ಯಕ್ತ ಮುರಳಿ 15-09-1971.

***ಮಾಸ್ಟರ್ ಜ್ಞಾನ ಸೂರ್ಯ ಆತ್ಮರ ಕರ್ತವ್ಯ***

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಸರ್ವಾತ್ಮರ ಪತಿತ ಸಂಕಲ್ಪಗಳನ್ನು, ವೃತ್ತಿಯನ್ನು ಅಥವಾ ದೃಷ್ಟಿಯನ್ನು ಭಸ್ಮ ಮಾಡುವ ಮಾಸ್ಟರ್ ಜ್ಞಾನ ಸೂರ್ಯನು.

2. ನಾನು ಮೈಟ್ ಹೌಸ್ ಆಗಿ (ಶಕ್ತಿ ಸ್ವರೂಪ) ಪತಿತ ಆತ್ಮರಲ್ಲಿ ಇರುವ ಪತಿತ ಸಂಕಲ್ಪಗಳನ್ನು ಸಮಾಪ್ತಿ ಮಾಡಿ ಅವರಿಗೆ ಮನಸ್ಸಿನ ರಸವನ್ನು ಅನುಭವ ಮಾಡಿಸಿದ್ದೇನೆ.

3. ನನ್ನ ಮುಂದೆ ಯಾವ ಪತಿತ ಆತ್ಮ, ಯಾವುದೇ ಕರ್ಮೇಂದ್ರಿಯದ ರಸಕ್ಕೆ ಅರ್ಥಾತ್ ವಿನಾಶಿ ರಸಕ್ಕೆ ಆಕರ್ಷಿತವಾಗದೆ ಅವರಿಗೆ ಅಲೌಕಿಕ, ಅತೀಂದ್ರಿಯ ಸುಖ ಅಥವಾ ರಸವನ್ನು ಅನುಭವ ಮಾಡಿಸಿ ಮನ್ಮನಾಭವ ಸ್ಥಿತಿಗೆ ತಲುಪಿಸಿರುವ ಮನ್ಮನಾಭವ ಸ್ವರೂಪ.

4. ನಾನು ದೇಹಾಭಿಮಾನಕ್ಕೆ ಅತೀತವಾಗಿರುವ ದೇಹೀ ಅಭಿಮಾನಿ.

5. ನಾನು ನಿರಾಕಾರಿ ಸ್ಥಿತಿಯಲ್ಲಿದ್ದು ನಿರಹಂಕಾರಿಯಾಗಿ, ಸ್ವತಹವಾಗಿ ನಿರ್ವಿಕಾರಿಯಾಗಿದ್ದೇನೆ.

6. 'ನಾನು ನಿರಾಕಾರಿಯಿಂದ ಸಾಕಾರದಲ್ಲಿ ಬಂದು ಕಾರ್ಯ ಮಾಡುತ್ತಿದ್ದೇನೆ' ಎಂಬ ಸ್ಮೃತಿಯಲ್ಲಿ ಇದ್ದು ಪ್ರತಿಯೊಂದು ಕರ್ಮವನ್ನು ಮಾಡುವ ಅಭ್ಯಾಸಿ.

7. ನನ್ನ ಪ್ರತಿಯೊಂದು ಸಂಕಲ್ಪ, ಮಾತು, ಕರ್ಮ ರಾಜ್ಯಯುಕ್ತವಾಗಿ ಪ್ರತ್ಯಕ್ಷ ಯೋಗಯುಕ್ತ, ಜ್ಞಾನಯುಕ್ತ, ಸ್ನೇಹಯುಕ್ತ, ದಿವ್ಯಅಲೌಕಿಕ ಮೂರ್ತಿಯಾಗಿ ಈ ವಿಶ್ವದ ಮುಂದೆ ಪ್ರತ್ಯಕ್ಷ ಪ್ರಮಾಣವಾಗಿ ಕಾಣಿಸಿಕೊಂಡಿದ್ದೇನೆ.

8. ನಾನು ಪ್ರತಿ ಸಂಕಲ್ಪ, ಪ್ರತಿಹೆಜ್ಜೆ ಸದಾ ತಂದೆಯ ಆಜ್ಞೆಯನುಸಾರವಾಗಿ ನಡೆಯುತ್ತಾ ಇತರ ಆತ್ಮರ ಇಚ್ಛೆಗಳನ್ನು ಪೂರ್ತಿ ಮಾಡಿದ್ದೇನೆ.

9. ನಾನು ತಂದೆಯ ಅಜ್ಞಾನುಸಾರವಾಗಿ ಅಮೃತ ವೇಳೆಯಿಂದ ರಾತ್ರಿಯವರೆಗೆ ನನ್ನ ದಿನಚರಿಯನ್ನು ಯಾವ ಆಜ್ಞೆಗಳು ಲಭಿಸಿದೆಯೋ ಅವುಗಳಿಂದ ನನ್ನ ವೃತ್ತಿ, ದೃಷ್ಟಿ, ಸಂಕಲ್ಪ, ಸ್ಮೃತಿ, ಸೇವೆ & ಸಂಬಂಧಗಳನ್ನು ನಡೆಸುವ ಆಜ್ಞಾಕಾರಿ.

10. ನಾನು ಪ್ರತಿಯೊಬ್ಬ ಆತ್ಮನ ಪ್ರತಿ ಸದಾ ಕಾಲಕ್ಕಾಗಿ ದಯಾ ಭಾವನೆಯನ್ನಿಟ್ಟು ಜ್ಞಾನ ಶಕ್ತಿಯೊಂದಿಗೆ ಮಹಾನತೆಯಲ್ಲಿ ಇದ್ದೇನೆ.

11. ದಾತನ ಮಗುವಾದ ನಾನು ಎಲ್ಲರಿಗೂ ದಾತನಾದ ಬೇಹದ್ ವೈರಾಗಿ.